## ವಿಧಾನಸಭಾ ಚುನಾವಣೆ: ಕ್ಲೈಮಾಕ್ಸ್ ಇಂದು

# ಮತ ಎಣಿಕೆಗೆ ಸುರತ್ಕಲ್ ಎನ್‌ಐಟಿಕೆ ಸಜ್ಜು

**| ಒಟ್ಟು ಮತಗಟ್ಟೆಗಳು: 1860 | ಗರಿಷ್ಠ ಸುತ್ತು: 18**




**ನಿಷೇಧಾಜ್ಞೆ ಜಾರಿ; ವಿಜಯೋತ್ಸವ ಇಲ್ಲ**

ಮತ ಎಣಿಕೆ ಮುಕ್ತ ಹಾಗೂ ಶಾಂತಿಯುತವಾಗಿ ನಡೆಸುವುದದಕ್ಕಾಗಿ ಮೇ 13ರ ಬೆಳಗ್ಗೆ 5ರಿಂದ ಮಧ್ಯರಾತ್ರಿ 12 ರ ವರೆಗೆ ಮತ ಎಣಿಕೆ ಕೇಂದ್ರ ಸೇರಿದಂತೆ ಜಿಲ್ಲಾದ್ಯಂತ ಕಲಂ 144ರನ್ವಯ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಕಾನೂನು ಬಾಹಿರವಾಗಿ ಗುಂಪು ಸೇರುವುದು, ಮೆರವಣಿಗೆ ನಡೆಸುವಂತಿಲ್ಲ.

ಮಂಗಳೂರು, ಮೇ 12: ವಿಧಾನ ಸಭಾ ಚುನಾವಣೆಯ ಮತ ಎಣಿಕೆ ಪ್ರಕ್ರಿಯೆಗೆ ಎನ್‌ಐಟಿಕೆ ಸುರತ್ಕಲ್ ನಲ್ಲಿ ವ್ಯಾಪಕ ಬಂದೋ ಬಸ್ತ್ ಸಹಿತ ವ್ಯವಸ್ಥೆಗಳನ್ನು ಕೈಗೊಳ್ಳಲಾಗಿದ್ದು, ಮಧ್ಯಾಹ್ನ 2 ಗಂಟೆ ಸುಮಾರಿಗೆ ಫಲಿತಾಂಶ ನಿರೀಕ್ಷಿಸಲಾಗಿದೆ.

ಬೆಳಗ್ಗೆ 8 ರಿಂದ ಎಣಿಕೆ ಕಾರ್ಯ ಆರಂಭವಾಗಲಿದ್ದು, 544 ಸಿಬಂದಿ ಯನ್ನು ನೇಮಿಸಲಾಗಿದೆ. ಪ್ರತಿ ಕ್ಷೇತ್ರದ ಮತ ಎಣಿಕೆ ಕೇಂದ್ರವೊಂದಕ್ಕೆ 14 ಟೇಬಲ್‌ಗಳು, ಐದು ಅಂಚೆ ಮತ ಎಣಿಕೆ ಟೇಬಲ್‌ನಂತೆ ಒಟ್ಟು 112 ಇವಿಎಂ ಮತ ಎಣಿಕೆ ಹಾಗೂ 40 ಅಂಚೆ ಮತ ಎಣಿಕೆಗೆ ಟೇಬಲ್ ವ್ಯವಸ್ಥೆ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ರವಿಕುಮಾರ್ ಎಂ.ಆರ್. ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಅಂಚೆ ಮತ ಟೇಬಲ್‌ಗಳಿಗೊಂದಕ್ಕೆ ಒಬ್ಬರಂತೆ ಒಟ್ಟು 40 ಸಹಾಯಕ ಚುನಾವಣಾಧಿಕಾರಿಗಳನ್ನು ನಿಯೋಜಿಸಲು ಅವಕಾಶವಿದೆ. ಬೆಳ್ತಂಗಡಿ 18, ಮೂಡುಬಿದಿರೆ 16, ಮಂಗಳೂರು ನಗರ ಉತ್ತರ 18, ಮಂಗಳೂರು ನಗರ ದಕ್ಷಿಣ 18, ಮಂಗಳೂರು 15, ಬಂಟ್ವಾಳ 18, ಪುತ್ತೂರು 16, ಸುಳ್ಯ 17 ಸುತ್ತುಗಳಲ್ಲಿ ಎಣಿಕೆ ನಡೆಯಲಿದೆ.

**ಮೂರು ಹಂತದ ಭದ್ರತೆ**

ಕೇಂದ್ರದ ಆವರಣದ 100 ಮೀ. ವ್ಯಾಪ್ತಿಯೊಳಗೆ ಅನಧಿಕೃತ ವ್ಯಕ್ತಿಗಳು ಮತ್ತು ವಾಹನಗಳು ಪ್ರವೇಶಿಸದಂತೆ ತಡೆಬೇಲಿಯನ್ನು ನಿರ್ಮಿಸಲಾಗಿದೆ. ಎಣಿಕೆ ಕೇಂದ್ರ ಆವರಣದ ಮಧ್ಯದಲ್ಲಿ ಗೇಟು ನಿರ್ಮಿಸಿ ರಾಜ್ಯ ಶಸ್ತ್ರಸಜ್ಜಿತ ಪೊಲೀಸ್ ಪಡೆಗಳನ್ನು ನಿಯೋಜಿಸಲಾಗಿದೆ. ಪ್ರತಿ ಬಂಧಕ ವಸ್ತುಗಳನ್ನು ತೆಗೆದುಕೊಂಡು ಹೋಗದಂತೆ ತಪಾಸಣೆ ನಡೆಸಲಾಗುವುದು.

**ವ್ಯಾಪಕ ಬಂದೋಬಸ್ತ್**

300 ಹೆಡ್ ಕಾನ್‌ಸ್ಟೆಬಲ್‌ಗಳು, 39 ಎಎಸ್‌ಐಗಳು, 35 ಪಿಎಸ್‌ಐಗಳು, 14 ಸಿಪಿಐಗಳು, 6 ಡಿವೈಎಸ್‌ಪಿ, 2 ಡಿಸಿಪಿ, 400 ಸಿವಿಲ್ ಪೊಲೀಸ್ ಸಿಬಂದಿ, 200 ಗೃಹರಕ್ಷಕ ಸಿಬಂದಿ, 4 ಪ್ಲಟೂನ್ ಕೆಎಸ್‌ಆರ್‌ಪಿ, 2 ಕಂಪೆನಿ ಸಿಐಎಸ್‌ಎಫ್ ಹಾಗೂ 2 ಕಂಪೆನಿ ಸಿಎಪಿಎಫ್‌ಗಳನ್ನು ಒಟ್ಟು ಭದ್ರತೆಗಾಗಿ ನಿಯೋಜಿಸಲಾಗಿದೆ.

**ಮದ್ಯ ಮಾರಾಟ ನಿಷೇಧ**

ಅದೇ ರೀತಿ ಮೇ 12ರ ಮಧ್ಯರಾತ್ರಿ 12ರಿಂದ ಮೇ 13ರ ಮಧ್ಯರಾತ್ರಿ 12ರ ವರೆಗೆ ಮದ್ಯಮಾರಾಟವನ್ನೂ ನಿಷೇಧಿಸಲಾಗಿದೆ. ವಿವಿಪಾಟ್ ಸ್ಲಿಪ್‌ಗಳನ್ನು ಹಿಂದಿನ ಚುನಾವಣೆ ವೇಳೆ ಅದರಲ್ಲಿಯೇ ಇರಿಸಲಾಗಿತ್ತು, ಈ ಬಾರಿ ಅವುಗಳನ್ನು ಪ್ರತ್ಯೇಕ ಕವರ್‌ಗಳಲ್ಲಿಟ್ಟು ಸಂಗ್ರಹಿಸಿಡಲಾಗುವುದು.

ಮತ ಎಣಿಕೆಯ ಪ್ರತಿ ಟೇಬಲ್‌ಗೂ ಒಂದರಂತೆ ಸಿಸಿಟಿವಿ ಹಾಕಲಾ ಗಿದ್ದು ಅವುಗಳ ವೆಬ್‌ಕ್ಯಾಸ್ಟಿಂಗ್ ನಡೆಯುತ್ತಿರುತ್ತದೆ, ಅದರನ್ನು ಚುನಾವಣ ಆಯೋಗದವರು ವೀಕ್ಷಿಸಬಹುದಾಗಿದೆ.

## ಸುರತ್ಕಲ್ ಎನ್‌ಐಟಿಕೆಯಲ್ಲಿ ಮತ ಎಣಿಕೆ

# ರಾಷ್ಟ್ರೀಯ ಹೆದ್ದಾರಿ 66ರಲ್ಲಿ ಸಂಚಾರ ವ್ಯತ್ಯಯ ಸಾಧ್ಯತೆ

ಮಂಗಳೂರು, ಮೇ 12: ಸುರತ್ಕಲ್‌ನ ಎನ್‌ಐಟಿಕೆಯಲ್ಲಿ ಮತ ಎಣಿಕೆ ನಡೆಯಲಿರುವುದರಿಂದ ಮೇ 13ರಂದು ಬೆಳಗ್ಗೆ 6ರಿಂದ ಮತ ಎಣಿಕೆ ಕಾರ್ಯ ಮುಗಿಯುವವರೆಗೆ ರಾಷ್ಟ್ರೀಯ ಹೆದ್ದಾರಿ 66ರ ಎನ್ ಐಟಿಕೆ ಬಳಿ ವಾಹನ ಸಂಚಾರದಲ್ಲಿ ವ್ಯತ್ಯಯವಾಗುವ ಸಾಧ್ಯತೆ ಇದೆ. ಹಾಗಾಗಿ ಈ ರಸ್ತೆಯಲ್ಲಿ ಉಡುಪಿ ಮತ್ತು ಮಂಗಳೂರು ಕಡೆಗೆ ಸಂಚರಿಸುವ ಸಾರ್ವಜನಿಕರು ಬದಲಿ ರಸ್ತೆಯನ್ನು ಬಳಸುವಂತೆ ಮಂಗಳೂರು ಪೊಲೀಸ್ ಆಯುಕ್ತರು ಮನವಿ ಮಾಡಿದ್ದಾರೆ.

**ವಾಹನ ನಿಲುಗಡೆ ನಿಷೇಧ:** ರಾಷ್ಟ್ರೀಯ ಹೆದ್ದಾರಿ 66ರ ಬಳಿ ಇರುವ ಎನ್ ಐಟಿಕೆ ಬಳಿಯ ಸುಪ್ರೀಂ ಮಹಲ್ ಸಮುದಾಯ ಭವನ ದಿಂದ ಟೋಲ್ ಗೇಟ್‌ವರೆಗೆ ರಾಷ್ಟ್ರೀಯ ಹೆದ್ದಾರಿ ಮತ್ತು ಹೆದ್ದಾರಿಗೆ ತಾಗಿಕೊಂಡಿರುವ ಸರ್ವೀಸ್ ರಸ್ತೆಯ ಎರಡೂ ಬದಿಯಲ್ಲಿ ವಾಹನ ನಿಲ್ಲಿಸುವಂತಿಲ್ಲ.

**ವಾಹನ ನಿಲುಗಡೆ ಸ್ಥಳ:** ಮಂಗಳೂರು ಕಡೆಯಿಂದ ಮತ ಎಣಿಕೆ ಕೇಂದ್ರಕ್ಕೆ ಬರುವ ಸಾರ್ವಜನಿಕರು ಎನ್‌ಐಟಿಕೆ ಜಂಕ್ಷನ್ ಬಳಿ ಎಡಕ್ಕೆ ತಿರುಗಿ ಎನ್‌ಐಟಿಕೆ ಕ್ಯಾಂಪಸ್‌ನ ಅಂಡರ್ ಪಾಸ್ ಮುಖಾಂತರ ಸಾಗಿ ನಾಲ್ಕು ಚಕ್ರ ವಾಹನಗಳನ್ನು ಎನ್‌ಐಟಿಕೆ ವಸತಿಗೃಹದ ಬಳಿಯ ಪಾರ್ಕಿಂಗ್ ಸ್ಥಳದಲ್ಲಿ ನಿಲುಗಡೆ ಮಾಡಬೇಕು. ದ್ವಿಚಕ್ರ ವಾಹನಗಳನ್ನು ಎನ್‌ಐಟಿಕೆ ಇಂಗ್ಲಿಷ್ ಮೀಡಿಯಂ ಸ್ಕೂಲ್ ಮೈದಾನದಲ್ಲಿ ನಿಲುಗಡೆ ಮಾಡಬೇಕು ಅಥವಾ ಸುರತ್ಕಲ್ ಸುಪ್ರೀಂ ಮಹಲ್ ಸಮುದಾಯ ಭವನ ಬಳಿ ರಾಷ್ಟ್ರೀಯ ಹೆದ್ದಾರಿಯಿಂದ ಎಡಬದಿಯ ತಡಂಬೈಲ್ ಸದಾಶಿವ ಮಹಾಗಣಪತಿ ದೇವಸ್ಥಾನ ರಸ್ತೆಯಲ್ಲಿ ಸಾಗಿ ನಿಗದಿಪಡಿಸಲಾದ ಪಾರ್ಕಿಂಗ್ ಸ್ಥಳದಲ್ಲಿ ನಿಲುಗಡೆ ಮಾಡಬೇಕು.

ಮೂಲ್ಕಿ ಕಡೆಯಿಂದ ಬರುವ ಸಾರ್ವಜನಿಕರು ಎನ್‌ಐಟಿಕೆ ಜಂಕ್ಷನ್ ಬಳಿ ಬಲಕ್ಕೆ ತಿರುಗಿ ಎನ್‌ಐಟಿಕೆ ಕ್ಯಾಂಪಸ್‌ನ ಅಂಡರ್‌ಪಾಸ್ ಮುಖಾಂತರ ಸಾಗಿ ನಾಲ್ಕು ಚಕ್ರ ವಾಹನಗಳನ್ನು ಎನ್‌ಐಟಿಕೆ ವಸತಿಗೃಹದ ಬಳಿಯ ಪಾರ್ಕಿಂಗ್ ಸ್ಥಳದಲ್ಲಿ ನಿಲುಗಡೆ ಮಾಡಬೇಕು. ದ್ವಿಚಕ್ರ ವಾಹನಗಳನ್ನು ಎನ್‌ಐಟಿಕೆ ಇಂಗ್ಲಿಷ್ ಮೀಡಿಯಂ ಸ್ಕೂಲ್ ಮೈದಾನದಲ್ಲಿ ನಿಲುಗಡೆ ಮಾಡಬೇಕು ಅಥವಾ ರಾಷ್ಟ್ರೀಯ ಹೆದ್ದಾರಿ ಸುಪ್ರೀಂ ಮಹಲ್ ಸಮುದಾಯ ಭವನ ಬಳಿ ಯು-ಟರ್ನ್ ಮಾಡಿ ಎಡಬದಿಯ ತಡಂಬೈಲ್ ಸದಾಶಿವ ಮಹಾಗಣಪತಿ ದೇವಸ್ಥಾನದಲ್ಲಿ ಸಾಗಿ ನಿಗದಿಪಡಿಸಲಾದ ಪಾರ್ಕಿಂಗ್ ಸ್ಥಳದಲ್ಲಿ ನಿಲುಗಡೆ ಮಾಡುವಂತೆ ಪ್ರಕಟನೆ ತಿಳಿಸಿದೆ.

Vijaya Karnataka, Date:13/05/23, p,13